**O.S. 377-24 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 06.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ Z K T, ವಕೀಲರಿಂದಃ**

3. ದಾವಾ ಆಸ್ತಿ ಪ್ಲಾಟ ನಂಃ 4 ಹಾಗೂ 5 ಅಂದರೆ ಸರಿ. ಈಗ ಸಾಕ್ಷಿಗೆ ಒಂದು ಪೋಟೋ ತೋರಿಸಲಾಗಿ ಅದರಲ್ಲಿ ಪ್ಲಾಟ್ ನಂಃ 4 ಹಾಗೂ 5 ಇವೆ ಅಂದರೆ ಸರಿ. ಸದರಿ ಪೋಟೋವನ್ನು ನಿಡಿ.1 ಎಂದು ಗುರುತಿಸಲಾಯಿತು. ನಾನು ಶಾಲೆ ಕಲಿತಿಲ್ಲ. ಸ ನಂಃ 64 ಕ್ಷೇತ್ರ 7 ಎಕರೆ 21 ಗುಂಟೆ ಅಂದರೆ ಸರಿ. ಅದರ ಪೂರ್ವಿ ಮಾಲಿಕರು ಕೆಂಚಪ್ಪ ಮಾಯಕರ, ಶಿವಪ್ಪ ಮಾಯಕರ ಹಾಗೂ ಈಶ್ವರಪ್ಪ ಮಾಯಕರ ಅಂದರೆ ಸರಿ. ಈ 3 ಜನ ಜೀವಂತವಿಲ್ಲ. ಈ 3 ಜನ ತಮ್ಮ ಜೀವಿತ ಕಾಲದಲ್ಲಿ 40 ಇಂಟು 60 ಒಟ್ಟು 55 ಪ್ಲಾಟಗಳನ್ನು ಮಾಡಿದ್ದರು ಅಂದರೆ ಸರಿ. ಪ್ಲಾಟ ನಂಃ 4 ನ್ನು ದಿಃ 23.3.1990 ರಂದು 1 ನೇ ಪ್ರತಿವಾದಿಗೆ ಪೂರ್ವಿ ಮಾಲಿಕರು ನಿರಂತರ ಭೂ-ಭಾಡೆ ಹಕ್ಕನ್ನು ಕೊಟ್ಟರು ಅಂದರೆ ಸರಿಯಲ್ಲ. ನಾನು ನ್ಯಾಯಾಲಯದ ಆದೇಶದ ಪ್ರಕಾರ ಸ್ಟಾಂಪ ಡ್ಯೂಟಿ ಕಟ್ಟಿಲ್ಲ. ಸದರಿ ಬಾಂಡುಗಳ ಮೇಲೆ ಈ ದಾವೆ ನಿಂತಿದೆ ಅಂದರೆ ಸರಿ. ನಾನು ಹಾಜರಪಡಿಸಿದ 7 ಪೋಟೋಗಳಲ್ಲಿ ಖಾಲಿ ಸೈಟ ಮಂಜುನಾಥ ಅತ್ತರವಾಲೆ ರವರಿಗೆ ಸಂಬಂಧಪಟ್ಟಿದೆ ಎಂದು ತೋರಿಸಲು ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿ. ಪೂರ್ವಿ ಮಾಲಿಕರಾದ ಕೆಂಚಪ್ಪ ಪರಪ್ಪ ಮಾಯಕರ, ಶಿವಪ್ಪ ಪರಪ್ಪ ಮಾಯಕರ ಹಾಗೂ ಈಶ್ವರಪ್ಪ ಪರಪ್ಪ ಮಾಯಕರ ರವರಿಗೂ ನಮಗೂ ರಕ್ತ ಸಂಬಂಧವಿದೆ. ರಕ್ತ ಸಂಬಂಧವಿದೆ ಎಂದು ತೋರಿಸಲು ದಾಖಲೆ ಹಾಜರಪಡಿಸಿಲ್ಲ. ಪೂರ್ವಿ ಮಾಲಿಕರಾದ ಕೆಂಚಪ್ಪ ಪರಪ್ಪ ಮಾಯಕರ, ಶಿವಪ್ಪ ಪರಪ್ಪ ಮಾಯಕರ ಹಾಗೂ ಈಶ್ವರಪ್ಪ ಪರಪ್ಪ ಮಾಯಕರ ರವರಿಗೂ ನಮಗೂ ರಕ್ತದ ಸಂಬಂಧಿಕರು ಇರುವ ದಾಖಲೆ ಹಾಜರಪಡಿಸಿಲ್ಲ ಹಾಗೂ ಅವುಗಳು ನಮ್ಮ ಬಳಿ ಇಲ್ಲ. ಮೂಲ ಮಾಲಿಕರಾದ ಕೆಂಚಪ್ಪ ಪರಪ್ಪ ಮಾಯಕರ, ಶಿವಪ್ಪ ಪರಪ್ಪ ಮಾಯಕರ ಹಾಗೂ ಈಶ್ವರಪ್ಪ ಪರಪ್ಪ ಮಾಯಕರ ರವರು ಕಬ್ಜೆ ಬೇಡಿ ತಮ್ಮ ಜೀವಿತ ಕಾಲದಲ್ಲಿ ಪ್ಲಾಟ ನಂಃ 4 ಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿ ನಂಃ 1 ರವರ ವಿರುದ್ಧ ದಾವೆ ಸಲ್ಲಿಸಿಲ್ಲ. ಬ್ಲಾಕ ನಂಃ 64 ಮೂಲ ಮಾಲಿಕರು ಮರಣ ಹೊಂದಿದ ನಂತರ ಅವರ ವಾರಸುದಾರರು ಒಟ್ಟು 28 ಜನ ಎಂದು ಸಾಕ್ಷಿಗೆ ಮುಟೇಶನ್ ಪ್ರತಿ ತೋರಿಸಲಾಗಿ, ಸಾಕ್ಷಿಯೂ ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು ನಿಡಿ.2 ಎಂದು ಗುರುತಿಸಲಾಯಿತು.

**O.S. 377-24** **PW : 1**

1 ನೇ ಪ್ರತಿವಾದಿ ಮಂಜುನಾಥ ಅತ್ತರವಾಲೆ ಹಾಗೂ ಆತನ ಹೆಂಡತಿ 2021 ರಿಂದ 2023 ವರೆಗೆ ಸುಳ್ಳು ದಾಖಲೆಗಳನ್ನು ಖೊಟ್ಟಿ ಸಹಿ ಮೂಲಕ ಪಿ ಐ ಡಿ ನಂಬರಗಳನ್ನು ಮಹಾನಗರ ಪಾಲಿಕೆಯಲ್ಲಿ ಸೃಷ್ಟಿ ಮಾಡುತ್ತಿದ್ದಾರೆಂದು ಪೋಲಿಸ ಕಮೀಶನರವರಿಗೆ ದೂರು ನೀಡಿದ್ದಾರೆಂದು ಸರಿ. ದೂರು ಕೊಟ್ಟ ನಂತರ ಮಹಾನಗರ ಪಾಲಿಕೆಯ ಆಯುಕ್ತರು ಹಾಗೂ ಪೋಲಿಸ ಆಯುಕ್ತರು, ನವನಗರ ಪೋಲಿಸ ಠಾಣೆ ಇನ್ಸಪೆಕ್ಟರ ಎಲ್ಲರೂ ಸ್ಥಳ ಪರಿಶೀಲನೆ ಮಾಡಿ ಪಂಚನಾಮೆ ಮಾಡಿದ್ದು, ಆ ಪ್ರಕಾರ ಪ್ಲಾಟ ನಂಃ 4 ಇದು 1 ನೇ ಪ್ರತಿವಾದಿಯದು. ಹಾಗೂ ಪ್ಲಾಟ ನಂಃ 5 ವಿಮಲಾ ದೊಡ್ಡಣ್ಣವರ ರವರದು ಅಂತಾ ವರದಿ ಸಲ್ಲಿಸಿದ ಮೇರೆಗೆ ಪಿ ಐ ಡಿ ನಂಃ 24/6929, ಪ್ಲಾಟ ನಂಃ 4 ಕ್ಕೆ ಸಂಬಂಧಪಟ್ಟಂತೆ ದಿಃ 21.8.2024 ರಂದು ರದ್ದಾಗಿದೆ ಅಂದರೆ ಗೊತ್ತಿಲ್ಲ. ನಾನು ದಾವೆ ಸಲ್ಲಿಸುವ ಪೂರ್ವದಲ್ಲಿ ಮಹಾನಗರ ಪಾಲಿಕೆಯಿಂದ ಹಾಗೂ ವಲಯ ಕಚೇರಿ, ನವನಗರ ಕಡೆಯಿಂದ ಪ್ಲಾಟ ನಂಃ 4 ಹಾಗೂ 5 ಗಳನ್ನು ಪ್ರತಿವಾದಿ 1 ಹಾಗೂ ವಿಮಲಾ ದೊಡ್ಡಣ್ಣವರ ರವರಿಗೆ ಸಂಬಂಧಪಟ್ಟಿಲ್ಲವೆಂದು ದಾಖಲೆ ಪಡೆದಿಲ್ಲ.

4. ಮಂಜುನಾಥ ಅತ್ತರವಾಲೆ ಎಂಬ ವ್ಯಕ್ತಿ ಬರೆದುಕೊಟ್ಟಿದ್ದಾನೆ ಎನ್ನಲ್ದಾ ಬಾಂಡ ಪೇಪರದಲ್ಲಿ ಮನೆ ಇದೆ ಅಂತಾ ತೋರಿಸಿದ್ದಾರೆಂದರೆ, ಶೆಡ್ ಇತ್ತು ಎಂದು ಹೇಳುತ್ತಾರೆ. ನಾನು ಮಂಜುನಾಥ ಪ್ರಕಾಶ ಅತ್ತರವಾಲೆ ರವರ ಸಾಕ್ಷಿ ಮಾಡಿಸುತ್ತೇನೆ. ಪ್ಲಾಟ ನಂಃ 4 ಹಾಗೂ 5 ಗಳು ಪ್ರತಿವಾದಿ 1 ಹಾಗೂ 2 ರವರ ಕಬ್ಜೆ ಇವೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹೊಂದಿದ ಪ್ಲಾಟ ನಂಃ 4 ರ ಚಕ್ಕುಬಂದಿ ಹೇಳಲು ಬರುವುದಿಲ್ಲ. ಅದೇ ರೀತಿ 2 ನೇ ಪ್ರತಿವಾದಿ ಪ್ಲಾಟ ನಂಃ 5 ರ ಚಕ್ಕುಬಂದಿ ಹೇಳಲು ಬರುವುದಿಲ್ಲ. 1987-88 ರಿಂದ ಇಲ್ಲಿಯವರೆಗೆ ಪ್ಲಾಟ ನಂಃ 4 ಹಾಗೂ 5 ಇವು ಡೆವಲಪ್ಡ ಪ್ಲಾಟನದಲ್ಲಿ ಬಂದಿವೆ ಅಂದರೆ ಸರಿ. ಪ್ರಕಾಶ ಅತ್ತರವಾಲೆ ಗೆ ನನ್ನ ಚಿಕ್ಕಪ್ಪ ನ ಮೂಲಕ ನಾನೇ ಪ್ಲಾಟುಗಳನ್ನು 1989 ರಲ್ಲಿ ಕೊಡಿಸಿದ್ದೇನೆ. 1989 ರಲ್ಲಿ ನಾನು ಕೊಡಿಸಿದ ಪ್ಲಾಟಿನ ದಾಖಲೆಯನ್ನು ಮಂಜುನಾಥ ರವರಿಂದ ತೆಗೆದುಕೊಂಡು ಹಾಜರಪಡಿಸಿದ್ದೇನೆ. ನಿಡಿ.2 ರಲ್ಲಿ ತೋರಿಸಿದ 28 ಜನ ಕಬ್ಜೆ ಬೇಡಿ ದಾವೆ ಸಲ್ಲಿಸಿಲ್ಲ ಅಂದರೆ ಸರಿ.

**O.S. 377-24** **PW : 1**

ಮೂಲ ಮಾಲಿಕರಾದ  ಕೆಂಚಪ್ಪ ಪರಪ್ಪ ಮಾಯಕರ, ಶಿವಪ್ಪ ಪರಪ್ಪ ಮಾಯಕರ ಹಾಗೂ ಈಶ್ವರಪ್ಪ ಪರಪ್ಪ ಮಾಯಕರ ರವರು ತಮ್ಮ ಜೀವಿತ ಕಾಲದಲ್ಲಿ ಬ್ಲಾಕ ನಂಃ 64 ರಲ್ಲಿರುವ ಪ್ಲಾಟಗಳನ್ನು ಮಾರಾಟ ಮಾಡಿ ಹಣ ಪಡೆದಿದ್ದಾರೆ ಅಂದರೆ ಸರಿ.  ಆ ಪ್ರಕಾರ ಖರೀದಿದಾರರು ಅವರವರ ಕಬ್ಜೆಯಲ್ಲಿದ್ದಾರೆ ಅಂದರೆ ಸರಿ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.